ತುಂಗಭದ್ರ ನದಿಗೆ ಹೈಲೆವಲ್ ಕಾಜ್‌ವೇ ನಿರ್ಮಾಣದ ಬಗ್ಗೆ.

3092- ಡಾ. ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಗೋವಿನ ಕೋವಿ ಹಾಗೂ ರಾಂಪುರ ನಡುವೆ ತುಂಗಭದ್ರ ನದಿಗೆ ಹೈಲೆವೆಲ್ ಕಾಜ್‌ವೇ ನಿರ್ಮಾಣ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೆ?

ಆ) ಹಾಗಿದ್ದಲ್ಲಿ, ಈಗ ಇದು ಯಾವ ಹಂತದಲ್ಲಿದೆ.

ಶ್ರೀ ಜಿ. ಪೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಅಂತಹ ಯೋಜನೆ ಸದ್ಯಕ್ಕೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಡಿ.ಬಿ. ಗಂಗಪ್ಪ : ಮಾನ್ಯ ಅಧ್ಯಕ್ಷಣಿಯವರೆ, ಹೊನ್ನಾಳಿ ತಾಲ್ಲೂಕಿನ ಗೋವಿನ ಕೋವಿ ಹಾಗೂ ರಾಂಪುರ ನಡುವೆ ಈ ನದಿ ಹರಿಯುತ್ತಿರುವುದರಿಂದ ನಮ್ಮ ಜಿಲ್ಲೆಯ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾದರೆ ಸುಮಾರು 69-70 ಕಿ.ಮೀ. ಸುತ್ತಳತೆ ಸುತ್ತುವರಿದುಕೊಂಡು ನಾವು ಹೋಗಬೇಕಾಗುತ್ತದೆ. ಆದ್ದರಿಂದಲೇ ನಾನು ಹೊನ್ನಾಳಿ ತಾಲ್ಲೂಕಿನ ಗೋವಿನ ಕೊವಿ ಹಾಗೂ ರಾಂಪುರ ನಡುವೆ ತುಂಗಭದ್ರಾ ನದಿಗೆ ಹೈ ಲೆವೆಲ್ ಕಾಸ್ ವೇ ನಿರ್ಮಾಣ ಮಾಡಿಕೊಡಿ ಎಂದು ಪ್ರಶ್ನೆಯನ್ನು ಕೇಳಿರತಕ್ಕದ್ದು. ಆದರೆ ಅಂಥ ಯೋಜನೆ ಸದ್ಯಕ್ಕೆ ಇಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾದರೆ ಈಗಾಗಲೇ ನಾನು ಹೇಳಿದಂತೆ ಸುಮಾರು 60-70 ಕಿ.ಮೀ. ದೂರ ಸುತ್ತುವರಿದುಕೊಂಡು ಹೋಗಬೇಕಾಗಿರುವುದರಿಂದ ನಮಗೆ ಸೇತುವೆಯನ್ನು ಮಾಡಿಸಿಕೊಡಿ ಎಂದು ನಾವು ಕೇಳುತ್ತಿಲ್ಲ. ಅಲ್ಲಿ ಕೇವಲ ಒಂದು ಹೈ ಲೆವೆಲ್ ಕಾಸ್‌ವೇಯನ್ನು ಮಾಡಿಸಿಕೊಟ್ಟರೆ ಉತ್ತಮವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪೆಚ್. ಅಶ್ವತ್ಥ ರೆಡ್ಡಿ : ಇವತ್ತು ಅಲ್ಲಿ ಒಂದು ಸಣ್ಣ ಹೈ ಲೆವೆಲ್ ಕಾಸ್‌ವೇ ಮಾಡಬೇಕಾದರೂ ಕೂಡ ಸುಮಾರು 2.75 ಕೋಟಿ ರೂಪಾಯಿ ಆಗುತ್ತದೆ. ಏಕೆಂದರೆ ಇದು ನೀರಾವರಿ ಪ್ರದೇಶದಲ್ಲಿದೆ. ಇದರಿಂದ ತುಂಗಭದ್ರಾ ಅಚ್ಚುಕಟ್ಟುದಾರರಿಗೆ ಅನುಕೂಲವಾಗುತ್ತದೆ. ಈ ಪ್ರಸ್ತಾವನೆಯನ್ನು ಮಾನ್ಯ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಮಂತ್ರಿಗಳ ಜೊತೆ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಬಿ. ಗಂಗಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ಇದರ ಜೊತೆಗೆ ನನ್ನ ಇನ್ನೊಂದು ವಿನಂತಿ ಎಂದರೆ, ನಮ್ಮ ಪಕ್ಕವಲ್ಲೇ ಚಿನ್ನಗಿರಿ ತಾಲೂಕೂ ಕೂಡ ಇರುವುದರಿಂದ ಅವರಿಗೂ ಕೂಡ ಬಹಳ ತೊಂದರೆಯಾಗಿದೆ. ಆದ್ದರಿಂದ ಆ ಭಾಗದ ಜನರಿಗೂ ಅನುಕೂಲವಾಗುವಂತೆ ಏನಾದರೂ ಒಂದು ವ್ಯವಸ್ಥೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಇದು ನೀರಾವರಿ ವಿಷಯಾದಲ್ಲಿ ಬರುವುದರಿಂದ..

ಶ್ರೀ ಜಿ.ಪೆಚ್. ಅಶ್ವತ್ಥ ರೆಡ್ಡಿ : ನನ್ನ ಉತ್ತರದಲ್ಲಿ ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಮಂತ್ರಿಗಳ ಜೊತೆ ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ಆರ್. ಗುರುದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೆ ನನಗೆ ಉತ್ತರ ಬಂದಿಲ್ಲ. ಇದು ಸರ್ವೇಸಾಮಾನ್ಯ ಎನಿಸುತ್ತದೆ. ನಮಗೆ ಉತ್ತರಗಳು ತಲುಪುತ್ತಿಲ್ಲ ಎಂದು ಸುಮಾರು ಜನ ಸದಸ್ಯರು ದೂರುಗಳನ್ನು ಹೇಳುತ್ತಿದ್ದಾರೆ. ತಮ್ಮಿಂದಲೂ ಕೂಡ ನನಗೆ ಉತ್ತರ ಬಂದಿಲ್ಲ. ದಯವಿಟ್ಟು ನನಗೆ ಉತ್ತರವನ್ನು ಒದಗಿಸಿಕೊಟ್ಟರೆ ನಂತರ ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಇಲಾಖೆಯ ಅಧಿಕಾರಿಗಳಿಂದ ಯಾವಾಗಲೂ ಉತ್ತರಗಳೇ ಬರುವುದಿಲ್ಲ. ಬಂದರೂ ಸದನ ಪ್ರಾರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಕೊಡುತ್ತಾರೆ. ಇದಿರಿಂದ ನಮಗೆ ಬಹಳ ತೊಂದರೆಯಾಗುತ್ತಿದೆ. ಪ್ರತಿಯೊಂದು ಸಾರಿಯೂ ಇದೇರೀತಿ ನಮಗೆ ತೊಂದರೆಯಾಗುತ್ತಿದೆ. ಜವಾಬ್ದಾರಿಯಿಂದ ಇಲಾಖೆಯ ಅಧಿಕಾರಿಗಳು ಕೆಲಸಮಾಡುತ್ತಿಲ್ಲ.

ಉಪಾಧ್ಯಕ್ಷಿಣಿಯವರು : ಈ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ಇದನ್ನು ತಡೆಹಿಡಿದು ಮುಂದೆ ತೆಗೆದುಕೊಳ್ಳೋಣ.

ಶ್ರೀ ಪೆಂಕಾಲ್ ಎಂ. ಮಲ್ಲಪ್ಪ : ನಮಗೆ ಯಾರಿಗೂ ಕೂಡ ಉತ್ತರವೇ ಬಂದಿಲ್ಲ. ಯಾರು ಪ್ರಶ್ನೆಯನ್ನು ಕೇಳುತ್ತಾರೆ ಅವರಿಗೆ ಮಾತ್ರ ಉತ್ತರವನ್ನು ಒದಗಿಸುತ್ತಾರೆ.

ಶ್ರೀ ಬಿ.ಆರ್. ಗುರುದೇವ್ : ನನ್ನ ಹತ್ತಿರ ಉತ್ತರ ರೆಡಿ ಇದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಅವರ ಹತ್ತಿರ ಉತ್ತರ ಇದೆಯಂತೆ. ಆದರೆ ನಮಗೆ ಬಂದಿಲ್ಲ.

ಉಪಾಧ್ಯಕ್ಷಿಣಿಯವರು : ಇಲ್ಲ ನನಗೂ ಕೂಡ ಉತ್ತರ ಬಂದಿಲ್ಲ.

ಶ್ರೀ ಬಿ.ಆರ್. ಗುರುದೇವ್ : ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಅಲ್ಲದೇ ತಮ್ಮಿಂದಲೂ ಕೂಡ ನನಗೆ ಉತ್ತರ ಬಂದಿಲ್ಲ. ತಮ್ಮ ಹತ್ತಿರ ಅಥವಾ ಅಧಿಕಾರಿಗಳ ಹತ್ತಿರ ಉತ್ತರ ಇದ್ದರೆ ನನಗೆ ಕಳುಹಿಸಿಕೊಟ್ಟರೆ ಅದರ ಮೇಲೆ ಉಪಪ್ರಶ್ನೆಯನ್ನು ಕೇಳಬಹುದು. ಇಲ್ಲದಿದ್ದರೆ ಈ ಪ್ರಶ್ನೆ ಮುಂದಕ್ಕೆ ಹೋಗುತ್ತದೆ. ಆ ದೃಷ್ಟಿಯಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ಇದನ್ನು ವಿಥ್‌ಹೋಲ್ಡ್ ಮಾಡಿ ಮುಂದಕ್ಕೆ ಹೋಗೋಣ.

(ಪ್ರ.ಪ್ರ. 3096ನ್ನು ತಡೆ ಹಿಡಿಯಲಾಯಿತು)

ಸಿದ್ದಾಪುರ ಮಂಡಲ ಪಂಚಾಯತ್‌ನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ.

3187. ಶ್ರೀ ಗೋಪಾಲ ಮುಕಂದ ಕಾನಡೆ (ಸಿರಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿದ್ದಾಪುರ ಮಂಡಲ ಪಂಚಾಯತ್‌ನಲ್ಲಿ 1990-91ನೇ ಸಾಲಿಗೆ ಜವಾಹರ್ ರೋಜ್‌ಗಾರ್ ಯೋಜನೆಗಾಗಿ ಎಷ್ಟು ಹಣ ಹಾಗೂ ಧಾನ್ಯ ಒದಗಿಸಲಾಗಿದೆ.

ಆ) ಆ ರೋಜ್‌ಗಾರ್ ಯೋಜನೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರೋಜ್‌ಗಾರ್ ಯೋಜನೆಗೆ ಒದಗಿಸಿದ 55 ಕ್ವಿಂಟಾಲ್ ಅಕ್ಕಿ ವಿಚಾರಣೆಯೇ ಹಾಗಾದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು?